

ನಿಸರ್ಗದ ಅದ್ಭುತ ಗ್ರೇಟ್ ಬ್ಯಾರಿಯರ್ ರೀಫ್

ನಾನೂ ಹಿಂಬಾಲಿಸಿದೆ. ಅಯ್ಯೋ, ತಣ್ಣ ಕೊರೆವ ನೀರು! ಪಾದ ಮುಳುಗಿತು, ಮೊಣಕಾಲು ಮುಳುಗಿತು, ಮಂಡಿ ಮುಳುಗಿತು, ಸೊಂಟ ಮುಳುಗಿತು. ಕೊರೆವ ನೀರಿಗೆ ಉಸಿರು ಕಟ್ಟಿದಂತೆನಿಸುತ್ತಿದೆ...

ಹೊಟ್ಟೆ, ಎದೆ ಮುಳುಗಿ ಕುತ್ತಿಗೆ ತನಕ ಬಂದಾಗ ಎದ್ದೆದ್ದು ಬಿಕ್ಕಳಿಸಿದಂತೆ ದೊಡ್ಡುಸಿರು ಬರುತ್ತಿದೆ. ಅಯ್ಯಪ್ಪ, ನಂಗಾಗಲ್ಲ ಎನಿಸುತ್ತಿದೆ. ಆಗಲೇ ಕೆಳಗಿಳಿದು ನಿಂತಿರುವ ಕೃಷ್ಣ ಏನಾಗಲ್ಲ, ಇನ್ನೊಂದೇ ಹೆಜ್ಜೆ ಕೆಳಗಿಡು, ಹೆಲ್ಮೆಟ್ ಹಾಕುತ್ತಾರೆನ್ನುತ್ತ ಸಂಜ್ಞೆ ಮಾಡುತ್ತಿದ್ದಾನೆ. ನೀರು ಗದ್ದ ತಾಕತೊಡಗಿದಾಗ ಮೇಲೇರಿದ ವಾನ್ಸ್ ತಲೆ ಮೇಲೊಂದು 35 ಕೆಜಿ ಭಾರದ ಹೆಲ್ಮೆಟ್ ಗದುಮಿ ಕೆಳಗೆ ದೂಡಿದ. ಹೆಲ್ಮೆಟ್‌ನೊಳಗೆ ನಳಿಕೆ ಮೂಲಕ ಗಡಗಡ ಎಂದು ಗಾಳಿ ಒಳಬರುತ್ತಿತ್ತು. ಒಳಬರುವ ಗಾಳಿಯೊತ್ತಡ ಎಷ್ಟಿತ್ತೆಂದರೆ ಹೆಲ್ಮೆಟ್ ಒಳಗೆ ನೀರು ನುಗ್ಗಲು ಸಾಧ್ಯವಿಲ್ಲ. ನೀರೊಳಗಿದ್ದರೂ ಮುಖ ಮುಳುಗುವುದಿಲ್ಲ.

> ಹೆಚ್ಚುಕಮ್ಮಿ ಎಲ್ಲ ಪ್ರವಾಸಿಗರಿಗೂ ಕಾಣಸಿಗುವ ಬ್ಯಾರಿಯರ್ ರೀಫಿನ ಸೂಪರ್ ಸ್ಟಾರ್ ಮಾವೋರಿ ರಾಸ್ಸೆ. ಅದಕ್ಕೆ ಇವರಿಟ್ಟ ಹೆಸರು 'ವಾಲಿ'. ಎಣ್ಣೆ, ಗಾಳಿಯಿಂದ ತುಂಬಿದ ಅದರ ತಲೆ ಮೇಲಿರುವ ಗುಬಟು ಸುಲಲಿತವಾಗಿ ತೇಲಲು ಸಹಾಯ ಮಾಡುತ್ತದೆ. 30 ವರ್ಷ ಬದುಕುವ, 180 ಕೆ.ಜಿ. ತೂಗುವ ಅವು ಹುಟ್ಟುತ್ತ ದ್ವಿಲಿಂಗಿ. ನಾಲ್ಕಾರು ವರ್ಷಗಳಾದ ಮೇಲೆ ಪ್ರೌಢವಾಗಿ ಮೊದಲು ಹೆಣ್ಣು ನಂತರ ಗಂಡು ಆಗುತ್ತವೆ. ವಾಲಿ ಮೊದಲು ಹೆಣ್ಣಾಗಿ ಸಾರಾ ಆಗಿದ್ದ. ಒಂಬತ್ತು ವರ್ಷಗಳ ಬಳಿಕ ಗಂಡಾಗಿ ವಾಲಿ ಆದ. ವಯಸ್ಸ ಹಂತದವು ಒಬ್ಬಂಟಿಯಾಗಿ ಇರಬಯಸುತ್ತವೆ. ವಾಲಿಗಿಂತ ಹಿರಿಯವೇನಾದರೂ ಬಂದರೆ ಇದನ್ನೇ ಓಡಿಸಿ ತಾವು ಒಂಟಿಯಾಗಿರುತ್ತವಂತೆ. ಇದರಂತೆಯೇ ಇನ್ನೊಂದು 'ರಿಕ್ಕಿ'ಯೂ ಬರುತ್ತಿದೆಯಂತೆ.

ಒಂದು ಮೆಟ್ಟಿಲಿಳಿದದ್ದೇ ಕಡಲೊಳಗಿದ್ದೆ. ನೀರಿನೊಳಗೆ ಹಗುರವಾಗಿದ್ದೆ. ಬೆರಳು, ಉಗುರು, ಬೆನ್ನು, ಕೈಕಾಲುಗಳೆಲ್ಲ ಇವೆಯೋ ಇಲ್ಲವೋ ಎನ್ನುವಷ್ಟು ಹಗುರ. ಆಚೀಚೆ ಕಂಬಿ ಹಿಡಿಯದಿದ್ದರೆ ತೇಲಿ ಹೋಗುವೆನೇನೋ ಎನಿಸುವಷ್ಟು ಹಗುರ. ಗಾಳಿಗೆ ರೆಕ್ಕೆಯ ಭಾರ ಕಳೆದುಕೊಳ್ಳುವ ಹಕ್ಕಿ, ಬೇರಿನಿಂದ ನೆಲಕ್ಕೆ ಭಾರ ಕಳಚಿಕೊಳ್ಳುವ ಮರ, ತಮ್ಮ ಆಕಾರದಿಂದ ನೀರಿಗೆ ಭಾರ ಕಳಚಿಕೊಳ್ಳುವ ಜಲಚರಗಳು ಹಗುರವಾಗುತ್ತವೆ. ಭಾರ ಕಳಚಿಕೊಳ್ಳಲು ಬಾರದ ಮನಭಾರದ ನಾನೂ ಹಗುರವಾಗಿಬಿಟ್ಟಿದ್ದೆ. ಆಹಾ, ಎಂಥ ನಿರಾಳ! ನಿರಾಳ ಮಾಡಿಕೊಂಡದ್ದು ನಾನಲ್ಲ, ನೀರು. ಮುಳುಗಿರುವ ವಸ್ತುವನ್ನು ಮೇಲೆತ್ತುವ ಶಕ್ತಿ ನೀರಿಗಷ್ಟೇ ಅಲ್ಲ, ಎಲ್ಲ ದ್ರವಗಳಿಗೂ ಇದೆ. ಮೇಲೆತ್ತುವಿಕೆಯಿಂದಲೇ ನೀರೊಳಗಿರುವಾಗ ನಮ್ಮ ಭಾರ ಕಡಿಮೆಯಾಗಿ ತೇಲುತ್ತಿರುವಂತೆನಿಸುತ್ತದೆ. ಅದೊಂದು ಅನನ್ಯ ಆನಂದಾನುಭವ.

ಚಳಿ ಮಾಯವಾಗಿ ಅದ್ಭುತ ಲೋಕ ಕಾಣಿಸತೊಡಗಿತ್ತು! ಆಳಾಳವೂ ಸ್ಪಷ್ಟವಾಗಿ ಕಾಣುವಷ್ಟು ಪಾರದರ್ಶಕ, ನೀಲಿ, ಶುಭ್ರ ನೀರಿನಲ್ಲಿ ಮೀನುಗಳ ಹಿಂಡು ಸರಿದು ಹೋಯಿತು. ಹುಲಿಪಟ್ಟೆ ಗೆರೆಯ ಮತ್ತೊಂದು ಗುಂಪು ಬಂತು. ವೆಲ್ವೆಟ್‌ನಂತಹ ಕೆಂಪು ಮೈಯ ನುಣುಪನ್ನು ಮುಟ್ಟುವಾಸೆಯಾಗುವಷ್ಟು ಹೊಳಪಿನದೊಂದು. ಹಾಡೊಂದರ ನಿರ್ದಿಷ್ಟ ಲಯಕ್ಕೆ ಚಲಿಸುತ್ತಿರುವಂತೆ ಒಂದರ ಹಿಂದೊಂದು, ಒಂದರ ಪಕ್ಕ ಇನ್ನೊಂದು ಸರಿದುಹೋದವು. ಸೀದಾ ಬಂದು, ಸುಂಯ್ಯ ತಿರುಗಿ, ಅಗೋ ಅಷ್ಟು ದೂರ ತಲುಪಿ, ಮತ್ತೆ ತಿರುಗಿ ನಮ್ಮಿರವಿಗೆ ಕ್ಯಾರೇ ಅನ್ನದೆ ತಮ್ಮ ಪಾಡಿಗೆ ತಾವು ಸರಿದುಹೋದವು.

ನನ್ನೆದುರು ಬಂದ ವಾನ್ಸ್ ಬೆರಳನ್ನು ಕೆಳಗೊತ್ತೊತ್ತಿ ತೋರಿಸಿದ. ಎದುರಷ್ಟೇ ಅಲ್ಲ, ಕೆಳಗೂ ನೋಡು ಎಂಬಂತೆ. ಕೆಳ ನೋಡಿದರೆ ಅರೆರೇ! ವಿಮಾನದಿಂದ ನಗರವನ್ನು ನೋಡಿದಂತೆ ಕಾಣುತ್ತಿದೆ. ಬೃಹತ್ ಬಂಡೆಗಳು, ಅದರ ಮೇಲೆ ಹರಡಿಕೊಂಡ ನಾನಾ ಆಕಾರ, ಗಾತ್ರದ ಗಿಡಗಳು. ಅರಳಿ ನಿಂತ

